# ಅದೇ ವಾಟ್ಸ್‌ಆ್ಯಪ್; ಹೊಸ ಫೀಚರ್ಸ್




ಸಾಮಾಜಿಕ ಜಾಲತಾಣಗಳಲ್ಲಿ ಬದಲಾವಣೆಗೆ ಬಹುಬೇಗನೆ ಒಡ್ಡಿಕೊಳ್ಳುವ ವಾಟ್ಸ್‌ಆ್ಯಪ್, ತನ್ನಲ್ಲಿನ ಕೆಲ ಫೀಚರ್ಸ್‌ಗಳಲ್ಲಿನ ಅರೆಕೊರೆಗಳನ್ನು ಸರಿಪಡಿಸಿ, ಇನ್ನೂ ಕೆಲವನ್ನೂ ಮತ್ತಷ್ಟು ಅಪ್‌ಡೇಟ್ ಮಾಡಿ ಸಾಲು ಸಾಲಾಗಿ ಹೊಸ ಫೀಚರ್‌ಗಳನ್ನು ಬಳಕೆದಾರರಿಗೆ ನೀಡಿದೆ.

ಗ್ರೂಪ್ ವಿಡಿಯೊ ಕಾಲ್, ವಾಟ್ಸ್‌ಆ್ಯಪ್ ಸ್ಟೇಟಸ್ ಅನ್ನು ಫೇಸ್‌ಬುಕ್ ಸ್ಟೋರಿಯಲ್ಲಿ ಹಂಚಿಕೊಳ್ಳುವುದು, ವಾಟ್ಸ್‌ಆ್ಯಪ್ ಗ್ರೂಪ್‌ನ ಅಡ್ಮಿನ್‌ಗೆ ಇತ್ತಷ್ಟು ಅಧಿಕಾರ ವಿಸ್ತರಿಸುವುದು ಸೇರಿದಂತೆ, ವಿವಿಧ ಆಯ್ಕೆಗಳನ್ನು ಪರಿಚಯಿಸಿದೆ. ಈ ಮೂಲಕ ವಾಟ್ಸ್‌ಆ್ಯಪ್ ಮತ್ತಷ್ಟು ಬಳಕೆದಾರ ಸ್ನೇಹಿಯಾಗಿದೆ.

## ವಾಟ್ಸ್‌ಆ್ಯಪ್‌ನಿಂದ ಫೇಸ್‌ಬುಕ್‌ಗೆ ಲಿಂಕ್

ವಾಟ್ಸ್‌ಆ್ಯಪ್ 'ಫೇಸ್‌ಬುಕ್'ನ ಒಡೆತನದಲ್ಲಿದ್ದರೂ ಎರಡರ ಬಳಕೆಯಲ್ಲಿ ಪರಸ್ಪರ ಸಂಪರ್ಕ ಕಲ್ಪಿಸುವ ಅವಕಾಶ ಇರಲಿಲ್ಲ. ಆದರೆ, ಈಗ ವಾಟ್ಸ್‌ಆ್ಯಪ್ ಮೂಲಕವೇ ಫೇಸ್‌ಬುಕ್‌ನ ಸಂಪರ್ಕ ಸಾಧಿಸಬಹುದಾಗಿದೆ. ವಾಟ್ಸ್‌ಆ್ಯಪ್ ಸ್ಟೇಟಸ್ ಅನ್ನು ನೇರವಾಗಿ ಬಳಕೆದಾರರು ತಮ್ಮ ಫೇಸ್‌ಬುಕ್ ಖಾತೆಯ 'ಫೇಸ್‌ಬುಕ್ ಸ್ಟೋರಿ'ಗೆ ಹಂಚಿಕೊಳ್ಳಬಹುದು. ಮೊದಲು ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್‌ಗೆ ಒಂದೇ ಸ್ಟೇಟಸ್ ಅನ್ನು ಪ್ರತ್ಯೇಕವಾಗಿ ಹಾಕಬೇಕಿತ್ತು. ವಾಟ್ಸ್‌ಆ್ಯಪ್‌ನ ಹೊಸ ಫೀಚರ್‌ನಿಂದಾಗಿ ಸಮಯದ ಉಳಿತಾಯ ಆಗಿದೆ. ವಾಟ್ಸ್‌ಆ್ಯಪ್ ಸ್ಟೇಟಸ್ ಕೆಳಗೆ 'ಷೇರ್ ಟು ವಾಟ್ಸ್‌ಆ್ಯಪ್ ಸ್ಟೋರಿ' ಎಂಬ ಆಯ್ಕೆ ಕಾಣಿಸುತ್ತದೆ. ಅದನ್ನು ಕ್ಲಿಕ್ಕಿಸಿ ಫೇಸ್‌ಬುಕ್‌ನಲ್ಲೂ ಸ್ಟೇಟಸ್ ಹಂಚಿಕೊಳ್ಳಬಹುದು.

## 'ಫಾರ್ವರ್ಡ್' ಎಚ್ಚರಿಕೆ

'ಫ್ರೀಕ್ವೆಂಟ್ಲಿ ಫಾರ್ವರ್ಡ್' ಎಂಬ ಟೂಲ್ ಅನ್ನು ವಾಟ್ಸ್‌ಆ್ಯಪ್ ಪರಿಚಯಿಸುತ್ತಿದೆ. ಸ್ಪ್ಯಾಮ್ ಮೆಸೇಜ್‌ಗಳನ್ನು ಹತ್ತಿಕ್ಕುವುದು ಇದರ ಉದ್ದೇಶ. ಒಂದೇ ಮೆಸೇಜ್ ಸಾಕಷ್ಟು ಬಾರಿ ಫಾರ್ವರ್ಡ್ ಆಗುತ್ತಿದ್ದರೆ ಆ ಬಗ್ಗೆ 'ಇದು ಐದು ಬಾರಿಗಿಂತ ಹೆಚ್ಚು ಬಾರಿ ಫಾರ್ವರ್ಡ್ ಆದ ಮೆಸೇಜ್' ಎಂಬ ಸೂಚನೆ ನೀಡುತ್ತದೆ. ಹೆಚ್ಚು ಬಾರಿ ಫಾರ್ವರ್ಡ್ ಆಗುವ ಮೆಸೇಜ್ ಬಹುತೇಕವಾಗಿ ಸ್ಪ್ಯಾಮ್ ಆಗಿರುತ್ತದೆ. ಆ ಬಗ್ಗೆ ಎಚ್ಚರಿಸಲು ಈ ಫೀಚರ್ ಸಹಕಾರಿ.

## ಗ್ರೂಪ್ ಇನ್ವಿಟೇಷನ್ ನೀವೆ ನಿರ್ಧರಿಸಿ

ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ಹೇಳದೆ ಕೇಳದೆ ಇತರ ವಾಟ್ಸ್‌ಆ್ಯಪ್ ಬಳಕೆದಾರರನ್ನು ಸೇರಿಸುತ್ತಾರೆ. ಇದು ಬಹುತೇಕರಿಗೆ ಕಿರಿಕಿರಿ. ಗೊತ್ತಿಲ್ಲದಿರುವ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಬಳಕೆದಾರರನ್ನು ಕೇಳದೆಯೇ ಸೇರಿಸುವುದರಿಂದ ತಪ್ಪಿಸಿಕೊಳ್ಳುವ ಅವಕಾಶವನ್ನು ವಾಟ್ಸ್‌ಆ್ಯಪ್ ಕಲ್ಪಿಸಿದೆ. ಸೆಟ್ಟಿಂಗ್ಸ್‌ನಲ್ಲಿ 'ನೋಬಡಿ' ಎಂಬ ಆಯ್ಕೆ ಇದ್ದು ಅದನ್ನು ಆಯ್ದುಕೊಂಡರೆ ಬೇರೆಯವರು ಗ್ರೂಪ್‌ಗಳಿಗೆ ಆ್ಯಡ್ ಮಾಡಲಾಗದು. ಅದಕ್ಕಾಗಿ ನಿಮ್ಮ ಅನುಮತಿ ಬೇಕೆ ಬೇಕು. 'ಮೈ ಕಾಂಟ್ಯಾಕ್ಟ್' ಅನ್ನೋ ಆಯ್ಕೆ ಆಯ್ದುಕೊಂಡರೆ ಬಳಕೆದಾರರ ಸಂಪರ್ಕದಲ್ಲಿರುವವರು ಮಾತ್ರ ಇತರ ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ಆ್ಯಡ್ ಮಾಡಲು ಸಾಧ್ಯ.

## ಅಡ್ಮಿನ್ ಡಿಸ್ಮಿಸ್ ಮಾಡಿಬಿಡಿ

ವಾಟ್ಸ್‌ಆ್ಯಪ್ ಗ್ರೂಪ್‌ಗೆ ಒಬ್ಬರಿಗಿಂತ ಹೆಚ್ಚು ಮಂದಿ ಅಡ್ಮಿನ್‌ಗಳನ್ನಾಗಿ ಮಾಡಬಹುದು. ಮೂಲ ಅಡ್ಮಿನ್ ಹೊರತಾಗಿ ಉಳಿದ ಅಡ್ಮಿನ್‌ಗಳಿಗೆ ಸಹ ಅಡ್ಮಿನ್‌ಗಳನ್ನು ಹಾಗೂ ಗ್ರೂಪ್‌ನ ಸದಸ್ಯರನ್ನು ತೆಗೆದುಹಾಕುವ ಅಧಿಕಾರವಿದೆ. ಆದರೆ, ಮೂಲ ಅಡ್ಮಿನ್ ಅನ್ನು ಮಾತ್ರ ತೆಗೆದುಹಾಕುವ ಅಧಿಕಾರ ಇರಲಿಲ್ಲ. ವಾಟ್ಸ್‌ಆ್ಯಪ್ ಹೊಸ ಫೀಚರ್‌ನ ಪ್ರಕಾರ, ಗ್ರೂಪ್‌ನ ಅಡ್ಮಿನ್‌ಗಳನ್ನು ವಜಾಗೊಳಿಸುವ ಅವಕಾಶವನ್ನೂ ಕಲ್ಪಿಸಲಾಗಿದೆ. ಇದರಿಂದ ಮೂಲ ಅಡ್ಮಿನ್ ಮೇಲೆ ಸದಸ್ಯರು ಹಾಗೂ ಸಹ ಅಡ್ಮಿನ್‌ಗಳೂ ಹೆಚ್ಚು ನಿಗಾ ಇಡಲು ಸಾಧ್ಯವಾಗಲಿದೆ.

### ಅಡ್ಮಿನ್‌ಗಳಿಗೆ ಹೆಚ್ಚು ನಿಯಂತ್ರಣ

ಗ್ರೂಪ್ ಅನ್ನು ನಿರ್ವಹಿಸುವ ಸಲುವಾಗಿ ವಾಟ್ಸ್‌ಆ್ಯಪ್, ಅಡ್ಮಿನ್ ಅಧಿಕಾರವನ್ನು ಸೃಷ್ಟಿಸಿದೆ. ಇದೇ ಅಡ್ಮಿನ್‌ಗೆ ಗ್ರೂಪ್ ಅನ್ನು ನಿರ್ವಹಿಸುವ ಸಲುವಾಗಿ ಇನ್ನಷ್ಟು ಅಧಿಕಾರ ನೀಡಿದೆ. ಮೆಸೇಜ್‌ಗಳನ್ನು ಗ್ರೂಪಿನ ಇತರ ಅಡ್ಮಿನ್‌ಗಳಿಗಷ್ಟೇ ಕಳುಹಿಸಬೇಕೆ ಅಥವಾ ಎಲ್ಲ ಸದಸ್ಯರಿಗೂ ಕಳುಹಿಸಬೇಕೆ ಎಂದು ನಿರ್ಧರಿಸುವ ಅಧಿಕಾರವನ್ನು ನೀಡಿದೆ. ಅದೇ ರೀತಿ ಗ್ರೂಪ್ ವಿವರಣೆಯನ್ನು ಅಡ್ಮಿನ್ ಮಾತ್ರವೇ ಬದಲಿಸಬೇಕೆ ಅಥವಾ ಎಲ್ಲರೂ ಬದಲಾಯಿಸಬಹುದೇ ಎಂಬುದನ್ನೂ ನಿರ್ಧರಿಸಬಹುದು.

## ಫಿಂಗರ್‌ಪ್ರಿಂಟ್ ಅನ್‌ಲಾಕ್

ಆ್ಯಂಡ್ರಾಯ್ಡ್ ಮತ್ತು ಐಒಎಸ್ (ಐಫೋನ್ ಆಪರೇಟಿಂಗ್ ಸಿಸ್ಟಂ) ಆಧಾರಿತ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ವಾಟ್ಸ್‌ಆ್ಯಪ್ ಫಿಂಗರ್‌ಪ್ರಿಂಟ್ ಅನ್‌ಲಾಕ್ ಫೀಚರ್ ಲಭ್ಯವಿದೆ. ಇದು ಫಿಂಗರ್ ಪ್ರಿಂಟ್ ಮೂಲಕ ವಾಟ್ಸ್‌ಆ್ಯಪ್‌ನಲ್ಲಿ ಅನ್‌ಲಾಕ್ ಸೌಲಭ್ಯ ಕಲ್ಪಿಸುತ್ತದೆ. ಐಒಎಸ್ ಬಳಕೆದಾರರು ಈ ಫೀಚರ್ ಬಳಸಿಕೊಂಡು ಫಿಂಗರ್‌ಪ್ರಿಂಟ್ ಅಥವಾ ಫೇಸ್ ಐಡಿ ಮೂಲಕ ಆ್ಯಪ್‌ಗಳನ್ನು ಲಾಕ್ ಮಾಡಬಹುದು. ಹಾಗೆಯೇ ಫಿಂಗರ್‌ಪ್ರಿಂಟ್ ಅನ್‌ಲಾಕ್ ಆದಾಗ, ನೋಟಿಫಿಕೇಷನ್‌ಗಳಿಂದ ಕಂಟೆಂಟ್ ಹೈಡ್ ಮಾಡಲು ಈ ಫೀಚರ್ ನೆರವಿಗೆ ಬರುತ್ತದೆ.

## ನಿರಂತರ ಧ್ವನಿ ಸಂದೇಶ

ವಾಟ್ಸ್‌ಆ್ಯಪ್ ಆಡಿಯೊ ಮೆಸೇಜ್ ವಾಟ್ಸ್‌ಆ್ಯಪ್‌ನ ಇನ್ನೊಂದು ಸೌಲಭ್ಯ. ಈ ಮೊದಲು ಒಂದಕ್ಕಿಂತ ಹೆಚ್ಚು ಬಾರಿ ಧ್ವನಿಸಂದೇಶಗಳನ್ನು ಕಳುಹಿಸಿದ್ದರೆ ಬಳಕೆದಾರರು ಪ್ರತಿ ಸಂದೇಶದ ಕ್ಲಿಪ್ ಅನ್ನು ಪ್ಲೇ ಮಾಡಬೇಕಾಗಿತ್ತು. ವಾಟ್ಸ್‌ಆ್ಯಪ್ ಅಪ್‌ಡೇಟ್ ವರ್ಷನ್‌ನಿಂದಾಗಿ, ಬಳಕೆದಾರರು ಮಲ್ಟಿಪಲ್ ವಾಯ್ಸ್ ಮೆಸೇಜ್ ಅನ್ನು ಒಮ್ಮೆ ಪ್ಲೇ ಮಾಡಿದರೂ ಸಾಕು. ಉಳಿದ ಕ್ಲಿಪ್‌ಗಳೂ ಸ್ವಯಂಚಾಲಿತವಾಗಿ ಪ್ಲೇ ಆಗುತ್ತವೆ.

■ ಶಶಿಕುಮಾರ್ ಸಿ.